ಕರ್ನಾಟಕ ಸರ್ಕಾರ

ಸಂ. ಆರ್‌ಡಿ 21 ಎಲ್‌ಜಿಪಿ 83

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ -2
ಬೆಂಗಳೂರು, ದಿನಾಂಕ 16-9-1994

<u>ಸುತ್ತೋಲೆ</u>

ವಿಷಯ: ಕೃಷಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 95ರ ಪ್ರಕಾರ ಪರಿವರ್ತಿಸುವ ಹಿಡುವಳಿ ಜಮೀನಿನಲ್ಲಿ ಖರಾಬು ಎಂದು ವಿಂಗಡಿಸಲಾದ ಜಮೀನನ್ನು ಸಹ ಪರಿವರ್ತಿಸಲು ಸೂಚನೆ ಬಗ್ಗೆ.

---

1964ರ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 95 ರ ರೀತಿ ಕೃಷಿ ಜಮೀನನ್ನು ಪರಿವರ್ತಿಸಲು ಅವಕಾಶವಿದೆ. ಕೆಲವು ಹಿಡುವಳಿ ಜಮೀನಿನಲ್ಲಿ ಅಥವಾ ಅದರ ಮಧ್ಯೆ ಭಾಗದಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು, ಬಂಡೆ, ಹಳ್ಳ ತಗ್ಗಿನ ಪ್ರದೇಶ ಮರ ಇತ್ಯಾದಿಗಳನ್ನು ಖರಾಬು ಎಂದು ವಿಂಗಡಿಸಲಾಗಿದ್ದು ಭೂಮಾಲೀಕರಿಗೆ ಈ ಜಮೀನಿನ ಮೇಲೆ ಹಕ್ಕು ಇರುವುದಿಲ್ಲ. ಆದರೆ ಇಂತಹ ಖರಾಬು ಎಂದು ಪರಿಗಣಿಸಲಾಗುತ್ತಿರುವ ಜಮೀನಿನ ಮೇಲೆ ಭೂ ಮಾಲೀಕರಿಗೆ ಹಕ್ಕು ಇಲ್ಲದಿದ್ದರೂ ಅದನ್ನು ಅವರಿಗೆ ಉಪಯೋಗಿಸಲು ರಹವಿದೆ. ಖರಾಬು ಪ್ರದೇಶವು ಜಮೀನು ಪರಿವರ್ತನೆಯಾದ ನಂತರ ಅವುಗಳನ್ನು ಕೃಷಿ ಯೋಗ್ಯವಲ್ಲದ ಖರಾಬು ಜಮೀನೆಂದು ಪರಿಗಣಿಸಲು ಬರುವುದಿಲ್ಲ.

2) ಭೂಮಾಲೀಕರು ಅವರ ಹಿಡುವಳಿ ಜಮೀನನ್ನು ಪರಿವರ್ತಿಸುವ ಸಮಯದಲ್ಲಿ ಅಂತಹ ಖರಾಬು ಪ್ರದೇಶವನ್ನು ಸೇರಿಸಿ ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಭೂಪರಿವರ್ತನೆ ಆದೇಶ ನೀಡುವಾಗ ಖರಾಬು ವಿಸ್ತೀರ್ಣವನ್ನು ಬಿಟ್ಟು ಉಳಿದ ವಿಸ್ತೀರ್ಣಕ್ಕೆ ಮಾತ್ರ ಮಂಜೂರಾತಿ ನೀಡಲಾಗುತ್ತಿದೆ. ಆದರೆ ಜಮೀನಿನ ಮಧ್ಯ ಭಾಗದಲ್ಲಿ ಖರಾಬು ವಿಸ್ತೀರ್ಣವಿದ್ದಲ್ಲಿ ಸದರಿ ಪ್ರದೇಶವು ಸಹ ಸೇರಿಸಿ ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದು ಸಾಮಾನ್ಯವಾಗಿದೆ. ಈ ಖರಾಬು ಪ್ರದೇಶಕ್ಕೆ ಪರಿವರ್ತನೆ ಶುಲ್ಕ ವಿಧಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಆದಾಯ ಸೋರಿಕೆ ಉಂಟಾಗುವುದು.

3) ಮೇಲೆ ಹೇಳಿರುವ ಹಿನ್ನೆಲೆಯಲ್ಲಿ ಭೂ ಪರಿವರ್ತನೆ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡುವುದು ಏನೆಂದರೆ ಭೂ ಪರಿವರ್ತಿಸುವ ಸಮಯದಲ್ಲಿ ಇಂತಹ ಖರಾಬು ಜಮೀನುಗಳಿಗೆ ಭೂ ಮೌಲ್ಯವನ್ನು ವಿಧಿಸಿ ಮತ್ತು ಈ ಪ್ರದೇಶಕ್ಕೂ ಸಹ ಭೂ ಪರಿವರ್ತನೆ ಶುಲ್ಕ ವಿಧಿಸಿ ಭೂ ಪರಿವರ್ತನೆ ಆದೇಶ ನೀಡಬೇಕೆಂದು ತಿಳಿಸಲಾಗಿದೆ. ಆದರೆ ಸಾರ್ವಜನಿಕ ಉಪಯೋಗಕ್ಕಾಗಿ ಬಂಡಿ ದಾರಿ ನಕಾಶೆ ಕಂಡ ದಾರಿ, ನದಿ, ತೊರೆ ಇತ್ಯಾದಿ ಪ್ರದೇಶಗಳನ್ನು ಕಾಯ್ದಿರಿಸತಕ್ಕದ್ದು.

ಸಹಿ:
(ಜಿತೇಂದ್ರ ಸಿಂಗ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ

ಸಂ. ಭೂಸನಿ: ತಾಂತ್ರಿಕ. 21 :95-6.

ಜ್ಞಾಪನ

ಮೇಲ್ಕಂಡ ಸುತ್ತೋಲೆಯ ಪ್ರತಿಯನ್ನು ಎಲ್ಲಾ ~~ಭೂಮಾ~~ ಪರ್ಯವೇಕ್ಷಕರಿಗೂ, ಭೂಮಾಪಕರುಗಳಿಗೂ ರವಾನಿಸಿ, ಕ್ರಮ ಕೈಗೊಳ್ಳಲು (ಸುತ್ತೋಲೆಯಂತೆ) ಸೂಚಿಸಿದೆ.

ಭೂದಾಖಲೆಗಳ ಸಹಾಯಕ ನಿರ್ದೇಶಕರು,
ತಿಪಟೂರು

247